
## ನಿಮ್ಮ ವಿಮಾ ಕಂಪೆನಿಯು ನಿಮ್ಮ ದೂರುಗಳಿಗೆ ಕಿವಿಗೊಡುತ್ತಿದೆಯೇ ?



ನಿಮ್ಮ ವಿಮಾ ಕಂಪೆನಿಯು ನಿಮ್ಮ ದೂರುಗಳನ್ನು ನಿವಾರಿಸದಿದ್ದರೆ ದಯವಿಟ್ಟು ಸಂಪರ್ಕಿಸಿರಿ.

ಐಆರ್‌ಡಿಎ ಗ್ರಿವೆನ್ಸ್ ಕಾಲ್ ಸೆಂಟರ್
ನಿ:ಶುಲ್ಕ ನಂ : 155 255

ನಿಮ್ಮ ದೂರನ್ನು ನೋಂದಾಯಿಸಿ ಕೊಳ್ಳಲು ಮತ್ತು ಅದರ ತಾಜಾ ಸ್ಥಿತಿಯನ್ನು ತಿಳಿದುಕೊಳ್ಳಲು ನೀವು ಇಲ್ಲಿ ನಮಗೆ ಇಮೈಲ್ ಮಾಡಬಹುದು www.igms.irda.gov.in

A public awareness initiative by
ಇವರಿಂದ ಒಂದು ಸಾರ್ವಜನಿಕ ಜಾಗೃತಿ ಉಪಕ್ರಮ
INSURANCE REGULATORY AND DEVELOPMENT AUTHORITY
*Promoting insurance. Protecting insured.*
www.irda.gov.in

INSURANCE REGULATORY AND DEVELOPMENT AUTHORITY
ಇವರಿಂದ ಒಂದು ಸಾರ್ವಜನಿಕ ಜಾಗೃತಿ ಉಪಕ್ರಮ

Bima Bemisaal



# ಆಸ್ತಿ ವಿಮೆಯ ಬಗ್ಗೆ ಕೈಪಿಡಿ

ಪರಿವಿಡಿಗಳು :


1. 1. ಈ ಪುಸ್ತಿಕೆಯ ಬಗ್ಗೆ 1

2. ಆಸ್ತಿ ವಿಮೆ 2

3. ಆಗಾಗ ಕೇಳಲಾಗುವ ಪ್ರಶ್ನೆಗಳು 9

4. ಪಾಲಿಸಿ ಧಾರಕರ ಸರ್ವಿಸಿಂಗ್ ಟಿಎಟಿಗಳು 18

5. ನಿಮ್ಮಲ್ಲಿ ದೂರುಗಳಿದ್ದರೆ 19


## 1. ಈ ಕೈಪಿಡಿಯ ಬಗ್ಗೆ

ಈ ಕೈಪಿಡಿಯು **ಆಸ್ತಿ ವಿಮೆಯ** ಮಾರ್ಗದರ್ಶಕವಾಗಿ ಇನ್‌ಶೂರೆನ್ಸ್ ರೆಗ್ಯುಲೇಟರಿ ಆಂಡ್ ಡೆವಲಪ್‌ಮೆಂಟ್ ಅಥಾರಿಟಿ (ಐಆರ್‌ಡಿಎ) ಇವರಿಂದ ವಿನ್ಯಾಸಗೊಳಿಸಲಾಗಿದೆ ಮತ್ತು ಸಾಮಾನ್ಯ ಮಾಹಿತಿಯನ್ನು ಮಾತ್ರ ನೀಡುತ್ತದೆ. ಇಲ್ಲಿ ನೀಡಲಾದ ಮಾಹಿತಿಯು ಸಂಬಂಧಿತ ಕಾನೂನುಗಳನ್ನು/ ನಿಯಮು/ಗಳನ್ನು ಅಥವಾ ನಿಯಂತ್ರಣಗಳನ್ನು ಬದಲಾಯಿಸುವುದಿಲ್ಲ ಅಥವಾ ಪ್ರಾವಧಾನಗಳನ್ನು ತಳ್ಳಿಹಾಕುವುದಿಲ್ಲ.

ಪಾಲಿಸಿಯ ಬಗ್ಗೆ ನಿರ್ದಿಷ್ಟವಾದ ಮಾಹಿತಿ ಅಥವಾ ಇತರ ಯಾವುದೇ ಹೆಚ್ಚುವರಿ ಮಾಹಿತಿಗಾಗಿ ದಯವಿಟ್ಟು ಲೈಸನ್ಸ್ ಹೊಂದಿರುವ ಏಜೆಂಟರನ್ನಾಗಲೀ ಅಥವಾ ಬ್ರೋಕರರನ್ನಾಗಲ್ಲಿ ಅಥವಾ ಐಆರ್‌ಡಿಎಯಿಂದ ನೋಂದಾಯಿಸಲ್ಪಟ್ಟ ವಿಮಾ ಕಂಪೆನಿಯನ್ನಾಗಲೀ ಸಂಪರ್ಕಿಸಿರಿ.

## 2. ಆಸ್ತಿ ವಿಮೆ

ಆಸ್ತಿಯ ವಿಮೆ ಎಂದರೆ ಬೆಂಕಿ ಮತ್ತು ಸಂಬಂಧಿತ ಅಪಾಯಗಳ ವಿರುದ್ಧ ಕಟ್ಟಡಗಳು, ಮಶೀನು, ಸರಕುಗಳು ಇತ್ಯಾದಿಗಳ ಕಳ್ಳತನ ಅಪಾಯಗಳು ಮುಂತಾದುವುಗಳ ವಿಮೆಯಾಗಿದೆ. ಸಮುದ್ರ, ವಿಮಾನ, ರೈಲ್ವೇ, ರಸ್ತೆ ಮತ್ತು ಕುರಿಯರ್‌ನಲ್ಲಿ ಬರುತ್ತಿರುವ ಸಾಮಾಗ್ರಿಗಳಿಗೆ ಮೆರೈನ್ ಕಾರ್ಗೊ ಇನ್‌ಶೂರೆನ್ಸ್‌ನಡಿಯಲ್ಲಿ ವಿಮೆ ಮಾಡಿಸಿಕೊಳ್ಳಬಹುದು. ಹಡಗು ಮತ್ತು ದೋಣಿಗಳ ಹಲ್‌ಗಳಿಗೂ ಮೆರೈನ್ ಹಲ್ ಇನ್‌ಶೂರೆನ್ಸ್‌ನಡಿಯಲ್ಲಿ ವಿಮೆ ಮಾಡಿಸಿಕೊಳ್ಳಬಹುದು. ಅಲ್ಲದೆ ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳ ವಿಮೆಗಾಗಿ ಎವಿಯೇಶನ್ ವಿಮಾ ಪಾಲಿಸಿ ಮುಂತಾದ ವಿಶೇಷ ಪಾಲಿಸಿಗಳು ಉಪಲಬ್ಧ ಇವೆ. ಹೀಗೆ ಆಸ್ತಿ ವಿಮೆಯು ಅತ್ಯಂತ ವ್ಯಾಪಕ ವಿಭಾಗದ ಸಾಮಾನ್ಯ ವಿಮೆಯಾಗಿದೆ ಮತ್ತು ನಿಮಗೆ ಅವಶ್ಯಕವಾದ ಸುರಕ್ಷೆಯು ನೀವು ಸುರಕ್ಷೆಯನ್ನು ಇಚ್ಛಿಸುವ ಆಸ್ತಿಯ ಪ್ರಕಾರವನ್ನು ಅವಲಂಬಿಸಿದೆ.

- **ಪ್ಯಾಕೇಜ್ ಅಥವಾ ಅಂಬ್ರೆಲ್ಲಾ ಪಾಲಿಸಿಗಳು**

ಪ್ಯಾಕೇಜ್ ಅಥವಾ ಅಂಬ್ರೆಲ್ಲಾ ಸುರಕ್ಷೆಗಳೂ ಉಪಲಬ್ಧವಿದ್ದು ಇವು ಒಂದೇ ದಸ್ತಾವೇಜಿನಡಿ ಸುರಕ್ಷೆಗಳ ಸಂಯೋಜನೆಯನ್ನು ನೀಡುತ್ತದೆ. ಉದಾಹರಣೆಗಾಗಿ ಹೌಸ್‌ಹೋಲ್ಡರ್ಸ್ ಪಾಲಿಸಿ, ಶಾಪ್ ಕೀಪರ್ಸ್ ಪಾಲಿಸಿ, ಆಫೀಸ್ ಪ್ಯಾಕೇಜ್ ಪಾಲಿಸಿ ಇತ್ಯಾದಿಗಳಿದ್ದು ಇದರಲ್ಲಿ ಒಂದು ಪಾಲಿಸಿಯಲ್ಲಿ ಕಟ್ಟಡಗಳು, ಸಾಮಾಗ್ರಿಗಳು ಇತ್ಯಾದಿ ಅನೇಕ ಭೌತಿಕ ಆಸ್ತಿಗಳಿಗೆ ಸುರಕ್ಷೆ ಒದಗಿಸಲಾಗುತ್ತದೆ. ಇಂತಹ ಪಾಲಿಸಿಗಳು ಆಸ್ತಿಯ ಸುರಕ್ಷೆಯನ್ನು ಮಾತ್ರವಲ್ಲದೆ ಕೆಲವು ನಿರ್ದಿಷ್ಟವಾದ ವೈಯಕ್ತಿಕ ಸಂಗತಿ ಅಥವಾ ಬಾಧ್ಯತೆಯ ಸುರಕ್ಷೆಯನ್ನು ಕೂಡಾ ಒಳಗೊಂಡಿರಬಹುದು. ನೀವು ಪರಿಗಣಿಸುತ್ತಿರುವ ಪಾಲಿಸಿಯಲ್ಲಿ ಒಳಗೊಂಡಿರುವ ಸುರಕ್ಷೆ ಮತ್ತು ಹರತುಪಡಿಸುವಿಕೆಗಳ ಸಂಪೂರ್ಣ ವಿವರಗಳನ್ನು ನೀವು ತಿಳಿದುಕೊಂಡಿರುವಿರಿ ಎಂಬುದನ್ನು ಖಾತ್ರಿ ಮಾಡಿಕೊಳ್ಳಿರಿ.



ಪ್ಯಾಕೇಜ್ ಅಥವಾ ಅಂಬ್ರೆಲ್ಲಾ ಸುರಕ್ಷೆಗಳು ಎಲ್ಲಾ ವಿಭಾಗಗಳಿಗೂ ಸಾಮಾನ್ಯ ನಿಯಮ ಮತ್ತು ನಿಬಂಧನೆಗಳನ್ನು ಹಾಗೂ ಪಾಲಿಸಿಯ ನಿರ್ದಿಷ್ಟವಾದ ವಿಭಾಗಗಳಿಗಾಗಿ ನಿರ್ದಿಷ್ಟ ನಿಯಮಗಳನ್ನು ಹೊಂದಿರಬಹುದು.

- **ಬೆಂಕಿ ವಿಮೆ**

ಅತ್ಯಂತ ಜನಪ್ರಿಯ ಆಸ್ತಿ ವಿಮೆ ಎಂದರೆ ಸ್ಟ್ಯಾಂಡರ್ಡ್ ಬೆಂಕಿ ವಿಮಾ ಪಾಲಿಸಿಯಾಗಿದೆ (ಫಯರ್ ಇನ್‌ಶೂರೆನ್ಸ್ ಪಾಲಿಸಿ). ಬೆಂಕಿ ವಿಮಾ ಪಾಲಿಸಿಯು ಪಾಲಿಸಿಯಡಿಯಲ್ಲಿ ಬೆಂಕಿ ಅಥವಾ ಇತರ ಅನಾಹುತಗಳಿಂದಾಗಿ ಒಳಗೊಂಡಿರುವ ಆಸ್ತಿಗಾಗುವ ಯಾವುದೇ ಹಾನಿ ಅಥವಾ ನಷ್ಟದ ವಿರುದ್ಧ ಸಂರಕ್ಷಣೆಯನ್ನು ನೀಡುತ್ತದೆ. ಬೆಂಕಿ ವಿಮಾ ಪಾಲಿಸಿಯಡಿಯಲ್ಲಿ ಒಳಪಡಿಸಬಹುದಾದ ಬೇರೆ ಪ್ರಕಾರಗಳ ಆಸ್ತಿಗಳೆಂದರೆ ವಾಸದ ಸ್ಥಳ, ಕಚೇರಿಗಳು, ಅಂಗಡಿಗಳು, ಆಸ್ಪತ್ರೆಗಳು, ದೇವಾಲಯಗಳು ಮತ್ತು ಅಲ್ಲಿನ ವಸ್ತುಗಳು, ಔದ್ಯೋಗಿಕ/ಉತ್ಪಾದನಾ ಅಪಾಯಗಳು ಮತ್ತು ಮಶಿನರಿ, ಸ್ಥಾವರಗಳು, ಉಪಕರಣಗಳು ಮತ್ತು ಇತರ ಸಾಮಾಗ್ರಿಗಳು ಮುಂತಾದ ವಸ್ತುಗಳು; ಕಚ್ಚಾ ಸಾಮಾಗ್ರಿ ಪ್ರಕ್ರಿಯೆಯಲ್ಲಿರುವ ಸಾಮಾಗ್ರಿ, ಅರೆ ಪೂರ್ಣಗೊಂಡ ಸಾಮಾಗ್ರಿಗಳು, ಪೂರ್ಣಗೊಂಡ ಸಾಮಾಗ್ರಿಗಳು, ಪ್ಯಾಕಿಂಗ್ ಸಾಮಾಗ್ರಿಗಳು ಮುಂತಾದ ಫ್ಯಾಕ್ಟರಿಗಳು, ಗೊಡೌನ್‌ಗಳು ಮತ್ತು ತೆರೆದ ಜಾಗದಲ್ಲಿರುವ ವಸ್ತುಗಳು; ಔದ್ಯೋಗಿಕ/ಉತ್ಪಾದನಾ ಅಪಾಯಗಳ ಹೊರಗಿರುವ ಉಪಯುಕ್ತ ಸಾಮಾಗ್ರಿಗಳು; ಔದ್ಯೋಗಿಕ ಅಪಾಯಗಳ ಹೊರಗಡೆಯ ಕಂಪೌಂಡ್‌ನಲ್ಲಿನ ಶೇಖರಣಾ ಅಪಾಯಗಳು; ಔದ್ಯೋಗಿಕ ಅಪಾಯಗಳ ಹೊರಗಡೆಯ ಕಂಪೌಂಡ್‌ನಲ್ಲಿರುವ ಟ್ಯಾಂಕ್ ಫಾರ್ಮ್‌ಗಳು/ಗ್ಯಾಸ್ ಹೋಲ್ಡರ್‌ಗಳು.

**ಬೆಂಕಿ ವಿಮೆಯಲ್ಲಿ ಏನೇನು ಒಳಗೊಂಡಿದೆ :**

ಇದನ್ನು ಬೆಂಕಿ ವಿಮೆ ಎಂದು ಕರೆಯಲಾದರೂ, ಬೆಂಕಿಯ

ಅಪಾಯವಲ್ಲದೆ ಇದು ಮಿಂಚು, ಸ್ಫೋಟ/ಒಳಸ್ಫೋಟ ವಿಮಾನಕ್ಕೆ ಹಾನಿ, ದೊಂಬಿ, ಮುಷ್ಕರ ಮತ್ತು ದುರುದ್ದೇಶದ ಹಾನಿ, ಚಂಡ ಮಾರುತ ಸುಂಟರಗಾಳಿ, ತೂಫಾನು, ಬಿರುಗಾಳಿ, ನೆರೆ ಮತ್ತು ಪ್ರವಾಹದ, ವಿರುದ್ಧ ಹಾನಿ, ಸಬ್‌ಸಿಡೆನ್ಸ್ ಮತ್ತು ಬಂಡೆ ಕುಸಿತ, ನೀರಿನ ಟ್ಯಾಂಕ್‌ಗಳ, ಉಪಕರಣಗಳು ಮತ್ತು ಪೈಪ್‌ಗಳ ಒಡೆಯುವಿಕೆ ಮತ್ತು ಅಥವಾ ಉಕ್ಕಿ ಹರಿಯುವುದನ್ನೊಳನೊಂಡು ಭೂಕುಸಿತ, ಮಿಸ್ಸೈಲ್ ಪರೀಕ್ಷಣೆ ಆಪರೇಶನ್‌ಗಳು, ಆಟೋಮಿಕ್ ಸ್ಪ್ರಿಂಕ್ಲರ್ ಇನ್‌ಸ್ಟಾಲೇಶನ್‌ಗಳಿಂದ ಆಕಸ್ಮಾತ್ ಸೋರಿಕೆ, ಪೊದೆಯ ಬೆಂಕಿ ಇತ್ಯಾದಿಗಳ ವಿರುದ್ಧವೂ ಸುರಕ್ಷೆಯನ್ನು ನೀಡುತ್ತದೆ.

**ಬೆಂಕಿ ಪಾಲಿಸಿಯು ಯಾವುದನ್ನು ಹೊರತುಪಡಿಸುತ್ತದೆ :**

ಬೆಂಕಿ ವಿಮಾ ಪಾಲಿಸಿಯು ಸಾಮಾನ್ಯವಾಗಿ ಪಾಲಿಸಿಯಡಿಯಲ್ಲಿ ''ಎಕ್ಸೆಸ್'' ಎಂದು ತಿಳಿಯಲಾಗುವ ನಿರ್ದಿಷ್ಟವಾದ ಒಂದು ಮೊತ್ತವನ್ನು ಒಳಗೊಂಡಿರುವುದಿಲ್ಲ. ಯುದ್ಧ ಮತ್ತು ಯುದ್ಧದಂತಹ ಆಪರೇಶನ್‌ಗಳು, ನ್ಯೂಕ್ಲಿಯರ್ ಅಪಾಯಗಳು, ಪ್ರದೂಷಣೆ ಅಥವಾ ಮಾಲಿನ್ಯ ಇಲೆಕ್ಟ್ರಿಕಲ್ ಮೆಕ್ಯಾನಿಕಲ್ ಬ್ರೇಕ್ ಡೌನ್, ಕಳವು ಮತ್ತು ಕಳ್ಳತನ ಮುಂತಾದುವುಗಳಿಂದಾದ ನಷ್ಟ ಅಥವಾ ಹಾನಿಯನ್ನು ಹೊರತುಪಡಿಸುತ್ತದೆ. ಹೆಚ್ಚುವರಿ ಪ್ರೀಮಿಯಂನ್ನು ಪಾವತಿಸಿದಲ್ಲಿ ಭೂಕಂಪ, ಒಮ್ಮೆಲೇ ದಹನ ಇತ್ಯಾದಿ ಅಪಾಯಗಳನ್ನು ಒಳಪಡಿಸಬಹುದು.

ವಾಸದ ಸ್ಥಳಕ್ಕಾಗಿ ದೀರ್ಘ ಕಾಲದ (ಕನಿಷ್ಠ ಮೂರು ವರ್ಷಗಳ ಅವಧಿ) ಪಾಲಿಸಿಯನ್ನು ನೀಡಲಾಗುವುದನ್ನು ಹೊರತುಪಡಿಸಿ ಬೆಂಕಿ ಪಾಲಿಸಿಗಳನ್ನು ಒಂದು ವರ್ಷದ ಸಲುವಾಗಿ ನೀಡಲಾಗುತ್ತದೆ.

- **ಬರ್ಗ್‌ಲರಿ ವಿಮೆ :**

ಒಂದು ವ್ಯಾಪಾರಿ ಸಂಸ್ಥೆ ಅಥವಾ ಮನೆಗೆ ಬರ್ಗಲರಿ ವಿಮಾ ಪಾಲಿಸಿಯನ್ನು ನೀಡಬಹುದು. ಪಾಲಿಸಿಯು ಮಾಲಕತ್ವದ



ಸರಕುಗಳು/ಸಾಮಾಗ್ರಿಗಳನ್ನು ಅಥವಾ ವಿಶೇಷತ: ಕವರ್ ಮಾಡಲಾಗಿದ್ದರೆ ಟ್ರಸ್ಟ್‌ನಲ್ಲಿ ದ್ದಂತಹವುಗಳು ಹೀಗೆ ಆ ಜಾಗದಲ್ಲಿನ ಆಸ್ತಿಯನ್ನು ಒಳಗೊಂಡಿರುತ್ತವೆ. ಅದು ಬೀಗಹಾಕಿದ ಸೇಫ್‌ನಲ್ಲಿರುವ ನಗದು, ಅಮೂಲ್ಯ ವಸ್ತುಗಳು, ಭದ್ರತೆಗಳನ್ನು ಅಥವಾ ಅದಕ್ಕಾಗಿ ವಿಶೇಷವಾಗಿ ಕೇಳಿಕೊಂಡಿದ್ದರೆ ಬೀಗ ಹಾಕಿ ಸ್ಟೀಲ್ ಕಪಾಟಿನಲ್ಲಿರಿಸಿದ ಕ್ಯಾಶ್ ಬಾಕ್ಸ್‌ನ್ನು ಒಳಗೊಂಡಿದೆ.

ಸ್ಥಳದಲ್ಲಿನ ವಸ್ತುಗಳಿಗೆ ಸುರಕ್ಷೆಯನ್ನು ಒದಗಿಸುವುದು ಮಾತ್ರವಲ್ಲದೆ ಬರ್ಗಲರಿ ವಿಮಾ ಪಾಲಿಸಿಯು ಕಳವಿನ ಅಥವಾ ಕಳವಿನ ಪ್ರಯತ್ನದ ಕಾಲಾವಧಿಯಲ್ಲಿ ಕಳ್ಳರಿಂದ ನಿಮ್ಮ ಮನೆ ಅಥವಾ ಸ್ಥಳಕ್ಕಾದ ಹಾನಿಯನ್ನು ಒಳಗೊಂಡಿರುತ್ತದೆ. ಪಾಲಿಸಿಯು ವಿಮಾ ಮೊತ್ತದ ಮಿತಿಗೊಳಪಟ್ಟು ಕಳವು/ಮನೆ ದರೋಡೆಯ ಕಾರಣ ವಿಮೆ ಮಾಡಲಾದ ನಿಮ್ಮ ಆಸ್ತಿಗಾದ ಹಾನಿಯ ವಾಸ್ತವಿಕ ನಷ್ಟ/ಹಾನಿಗಾಗಿ ಪಾವತಿ ಮಾಡುತ್ತದೆ. ಒಂದು ವೇಳೆ ವಿಮಾ ಮೊತ್ತವು ಸಾಕಷ್ಟಿಲ್ಲದಿದ್ದರೆ, ಪಾಲಿಸಿಯು ಪ್ರಮಾಣಾನುಸಾರದ ನಷ್ಟವನ್ನು ಮಾತ್ರ ಪಾವತಿಸುತ್ತದೆ. ಆದ್ದರಿಂದ ವಿಮಾ ಮೊತ್ತವು ಕಡಿಮೆ ಯಾಗುವುದಿಲ್ಲ ಎಂಬುದನ್ನು ಖಾತ್ರಿ ಮಾಡಿಕೊಳ್ಳಲು ಒಳಗೊಂಡಿರುವ ಆಸ್ತಿಯ ಸರಿಯಾದ ಮೌಲ್ಯಾಂಕನ ಮಾಡಿಕೊಳ್ಳತ್ತೀರಿ ಎಂದು ನೀವು ಖಾತ್ರಿ ಮಾಡಿಕೊಳ್ಳಬೇಕು.

ಬರ್ಗಲರಿ ವಿಮಾ ಪಾಲಿಸಿಯನ್ನು ಸಾಮಾನ್ಯವಾಗಿ ದೊಂಬಿ, ಮುಷ್ಕರ ದುರುದ್ದೇಶದ ಹಾನಿ ಮತ್ತು ಕಳ್ಳತನವನ್ನು ಒಳಪಡಿಸಲು ವಿಸ್ತರಿಸಬಹುದು.

**ಬರ್ಗಲರಿ ವಿಮಾ ಪಾಲಿಸಿಯಲ್ಲಿ ಏನು ಒಳಗೊಂಡಿರುವುದಿಲ್ಲ :**

ಸಾಮಾನ್ಯವಾಗಿ ಪಾಲಿಸಿಯು ನಿರ್ದಿಷ್ಟವಾಗಿ ಒಳಪಡಿಸಿರದಿದ್ದರೆ ಟ್ರಸ್ಟ್ ಕಮಿಷನ್‌ನಲ್ಲಿರುವ ಸಾಮಾಗ್ರಿ, ಆಭರಣ, ಕ್ಯೂರಿಯೋಸ್, ಟೈಟಲ್ ಡೀಡ್ಸ್, ನಿರ್ದಿಷ್ಟವಾಗಿ ವಿಮೆಯಲ್ಲಿ ಒಳಗೊಂಡಿರದಿದ್ದರೆ ವ್ಯಾಪಾರಿ ಪುಸ್ತಕಗಳು; ಬೆಂಕಿ/ಪ್ಲೇಟ್ ಗ್ಲಾಸ್ ವಿಮಾ

ಪಾಲಿಸಿಯಡಿಯಲ್ಲಿ ವಸೂಲಿ ಮಾಡಲಾಗುವ ಯಾವುದೇ ಮೊತ್ತ; ಹಿಂಸಾತ್ಮಕ ಅಥವಾ ಬೆದರಿಕೆಯಿಂದ ಪಡೆದುಕೊಂಡಿರದಿದ್ದರೆ, ಕೀ ಅಥವಾ ನಕಲಿ ಕೀಯನ್ನು ಉಪಯೋಗಿಸಿ ಸೇಫ್‌ನಿಂದ ಆದ ನಷ್ಟ; ಅಂಗಡಿಯ ಕಳ್ಳತನ; ನೀವು/ನಿಮ್ಮ ಕುಟುಂಬದ ಸದಸ್ಯರು ನಿಮ್ಮ ಕರ್ಮಚಾರಿಗಳನ್ನು ಒಳಗೊಂಡಿರುವ ಕ್ರಿಯೆಗಳು; ಯುದ್ಧದ ಅಪಾಯಗಳು, ದೊಂಬಿ ಮತ್ತು ಮುಷ್ಕರ (ಹೆಚ್ಚುವರಿ ಪ್ರೀಮಿಯಂ ಸದಾಯದಲ್ಲಿ ಸುರಕ್ಷೆ ಇರುತ್ತದೆ), ದೇವರ ಕೆಲಸ, ನ್ಯೂಕ್ಲಿಯರ್ ಅಪಾಯದಿಂದಾದ ನಷ್ಟ/ಹಾನಿಗೆ ಪಾವತಿ ಮಾಡುವುದಿಲ್ಲ.

- **ಎಲ್ಲಾ ಅಪಾಯಗಳ ವಿಮೆ**

ಎಲ್ಲಾ ಅಪಾಯಗಳ ವಿಮೆಯು ಸಾಮಾನ್ಯವಾಗಿ ಆಭರಣ ಮತ್ತು/ ಅಥವಾ ಕೈಯಿಂದ ಸಾಗಿಸಬಹುದಾದ ಉಪಕರಣ ಇತ್ಯಾದಿಗಳಿಗಾಗಿ ಸುರಕ್ಷೆಯನ್ನು ಒದಗಿಸುತ್ತದೆ. ಇದು ಸಾಮಾನ್ಯವಾಗಿ ಆಯುಧಗಳಿಗೆ ಸುರಕ್ಷೆಯನ್ನು ಒದಗಿಸುತ್ತದೆ. ಪಾಲಿಸಿಯ ವಿನ್ಯಾಸವು ಕಂಪೆನಿಯಿಂದ ಕಂಪೆನಿಗೆ ವ್ಯತ್ಯಾಸವಾಗಬಹುದು. ಎಲ್ಲಾ ಅಪಾಯಗಳ ವಿಮೆಯು ಹೊತುಪಡಿಸುವಿಕೆಗಳಿಂದ ಮುಕ್ತವಾಗಿಲ್ಲ ಎಂಬುದನ್ನು ಗಮನದಲ್ಲಿರಿಸಿಕೊಳ್ಳಬೇಕಾದುದು ಮುಖ್ಯವಾಗಿದೆ. ಆದ್ದರಿಂದ ''ಎಲ್ಲಾ ಅಪಾಯಗಳು'' ಎಂಬ ಪದಗಳು ಯಾವುದನ್ನೂ ಮತ್ತು ಎಲ್ಲವನ್ನೂ ಒಳಗೊಂಡಿದೆ ಎಂದರ್ಥವಲ್ಲ.

**ಎಲ್ಲಾ ಅಪಾಯಗಳ ವಿಮೆಯಲ್ಲಿ ಸಾಮಾನ್ಯವಾಗಿ ಯಾವುದನ್ನು ಹೊರತುಪಡಿಸಲಾಗುತ್ತದೆ :**

ಹೊರತುಪಡಿಸುವಿಕೆಗಳನ್ನು ನೋಡಿರಿ - ಸಾಮಾನ್ಯವಾಗಿ ಕೀಟ, ಹುಳು, ಮಿಲ್‌ಡ್ಯೂಗಳ ಕ್ರಿಯೆ, ಸವೆತ ಮತ್ತು ಸವಕಳಿ, ದುರುಸ್ತಿ ಡೈಯಿಂಗ್ ಅಥವಾ ಬ್ಲೀಚಿಂಗ್ ಅಥವಾ ಯಾವುದೇ ಕ್ರಮೇಣ ಆಪರೇಟಿಂಗ್ ಕಾರಣ, ಸಾಗಾಟ ಸಾಧನಕ್ಕೆ ಅಪಘಾತದಿಂದಾಗಿರದಿದ್ದರೆ ಒಡೆಯುವ ಸಾಮಾಗ್ರಿಗಳ ಒಡೆಯುವಿಕೆ/ ಕೆರೆತ ಅಥವಾ ಬಿರುಕು ಆಗುವಿಕೆ, ಆಕಸ್ಮಿಕ ಬಾಹ್ಯ ಕಾರಣದಿಂದಾಗಿರದಿದ್ದರೆ ಯಾವುದೇ ಯಾಂತ್ರಿಕ ಅಥವಾ



ಇಲೆಕ್ಟ್ರಿಕಲ್ ಬ್ರೇಕ್ ಡೌನ್/ಡಿರೇಂಜ್‌ಮೆಂಟ್, ಓವರ್ ವೈಂಡಿಂಗ್, ಡೆಂಟಿಂಗ್ ಅಥವಾ ಗಡಿಯಾರ ಅಥವಾ ಗಂಟೆಗಳಿಗೆ ಆಂತರಿಕ ಹಾನಿ, ಪೂರ್ಣತ: ಮುಚ್ಚಿದ ಸಲೂನುಗಳಲ್ಲಿದಿದ್ದರೆ ಕಾರ್‌ಗಳಿಂದ ಕಳವು, ಪರಿಣಾಮತ: ಆದ ನಷ್ಟಗಳು, ಯಾವುದೇ ಕಾನೂನು ಬಾಧ್ಯತೆ, ಯುದ್ಧದ ಅಪಾಯ, ನ್ಯೂಕ್ಲಿಯರ್ ಅಪಾಯಗಳು, ಯಾವುದೇ ಸರಕಾರಿ/ಸ್ಥಳೀಯ ಪ್ರಾಧಿಕಾರದ ಕ್ರಮ ಮತ್ತು ಅಪಾಯವನ್ನು ಹೆಚ್ಚಿಸಲು ಯೋಗದಾನ ನೀಡಿದ ವಿಮೆ ಮಾಡಿಸಿಕೊಂಡವರ ಕ್ರಿಯಯ ಕಾರಣ ಯಾವುದೇ ನಷ್ಟವನ್ನು ವಿಮೆಯ ಪರಿಧಿಯಿಂದ ಹೊರಗಿರಿಸಲಾಗಿದೆ.

ಹೆಚ್ಚುವರಿ ಪ್ರೀಮಿಯಂನ ಪಾವತಿ ಮಾಡಿದಲ್ಲಿ ಮೆಕ್ಯಾನಿಕಲ್ ಮತ್ತು/ಅಥವಾ ಇಲೆಕ್ಟ್ರಿಕಲ್/ಇಲೆಕ್ಟ್ರಾನಿಕ್ ಬ್ರೇಕ್ ಡೌನ್ ವಿಸ್ತರಣೆಯನ್ನು ನೀಡಬಹುದು.

- **ಮರೀನ್ ಕಾರ್ಗೊ ವಿಮೆ**

ಮರೀನ್ ಕಾರ್ಗೊ ವಿಮೆಯು ಜಲ, ವಾಯು, ರಸ್ತೆ ಅಥವಾ ರೈಲ್‌ನಲ್ಲಿ ಒಯ್ಯಲಾಗುತ್ತಿರುವುದನ್ನು, ರಿಜಿಸ್ಟರ್ಡ್ ಪೋಸ್ಟ್ ಪಾರ್ಸೆಲ್, ಕುರಿಯಲ್ ಅಥವಾ ಇವುಗಳಲ್ಲಿ ಎರಡು ಅಥವಾ ಹೆಚ್ಚಿನವುಗಳ ಸಂಯೋಜನೆಯನ್ನು ಒಳಗೊಂಡಿದೆ.

**ಯಾರು ಮರೀನ್ ಕಾರ್ಗೊ ವಿಮಾ ಪಾಲಿಸಿಯನ್ನು ತೆಗೆದುಕೊಳ್ಳಬಹುದು :**

ಖರೀದಿಸುವವರು, ಮಾರಾಟ ಮಾಡುವವರು, ಆಮದು/ರಫ್ತು ವ್ಯಾಪಾರಿಗಳು, ಖರೀದಿಸುವ ಏಜೆಂಟರು, ಕಾಂಟ್ರ್ಯಾಕ್ಟರರು, ಬ್ಯಾಂಕ್ ಮುಂತಾದವರು.

ಮರೀನ್ ಕಾರ್ಗೊ ಪಾಲಿಸಿಯು ಸರಕಿನಲ್ಲಿನ ಹಿತಾಸಕ್ತಿಯನ್ನು ಮತ್ತು ಮಾರಾಟದ ನಿಬಂಧನೆಗಳಂತೆ ಮಾಲಕತ್ವದ ವರ್ಗಾವಣೆಯ ನಂತರ ಹಿತಾಸಕ್ತಿಯನ್ನು ಹೊಂದಿರುವ ಯಾರೇ ಮೂರನೇ ಪಾರ್ಟಿ ಹಿತಾಸಕ್ತಿಗೂ ಕೂಡ ವಿಸ್ತರಿಸಲ್ಪಡುತ್ತದೆ.

**ಮರೀನ್ ಕಾರ್ಗೊ ವಿಮೆಯು ಹೇಗೆ ಸಹಾಯ ಮಾಡುತ್ತದೆ :**

ಸರಕು, ಸರಕನ್ನು ಸಾಗಿಸುವ ವಾಹನಕ್ಕೆ ಅಪಘಾತ, ತಾಗುವಿಕೆ , ಒಮ್ಮೆಲೇ ನಿಲ್ಲುವಿಕೆ ಇತ್ಯಾದಿಗಳ ಕಾರಣ ಹಾನಿ ಇವುಗಳನ್ನೊಳಗೊಂಡು ಅನೇಕ ಪ್ರಕಾರಗಳ ಅಪಾಯಕ್ಕೆ ಒಡ್ಡಲ್ಪಡುವ ಮೂಲಕ ಹಾನಿಗೊಳ್ಳಬಹುದು. ನೀವು ಮೂಲ ಸುರಕ್ಷೆಪಡೆಯಬೇಕೋ ಅಥವಾ ವ್ಯಾಪಕ ಸುರಕ್ಷೆ ಪಡೆಯಬೇಕೊ ಎಂದು ನಿರ್ದರಿಸಿರಿ. ಪಾಲಿಸಿಯ ನಿಯಮ ಮತ್ತು ನಿಬಂಧನೆಗಳನ್ನು ಓದಿರಿ ಮತ್ತು ತಿಳಿದುಕೊಳ್ಳಿರಿ. ''ಏನಾದರೂ'' ಕಡಿತ ಮಾಡುವಂತಹವು ಇವೆಯೇ ಎಂದು ಪರೀಕ್ಷಿಸಿಕೊಳ್ಳಿರಿ.

**ಮರೀನ್ ಕಾರ್ಗೊ ವಿಮಾ ಪಾಲಿಸಿಯಿಂದ ಸಾಮಾನ್ಯವಾಗಿ ಯಾವುದನ್ನು ಹೊರತುಪಡಿಸಲಾಗುತ್ತದೆ :**

ಇನ್‌ಹರೆಂಟ್ ವೈಸ್, ವಿಳಂಬ, ಸರಿಯಾದ ಪ್ಯಾಕಿಂಗ್ ಇಲ್ಲದಿರುವುದು ಇವುಗಳ ಕಾರಣ ನಷ್ಟ ಅಥವಾ ಹಾನಿ, ಆರ್ಥಿಕ ಡಿಫಾಲ್ಟ್ ಅಥವಾ ಹಡಗಿನ ಮಾಲೀಕರ ದಿವಾಳಿತನ ಮುಂತಾದುವುಗಳ ಕಾರಣ ನಷ್ಟ ಅಥವಾ ಹಾನಿ.

**ಉಪಲಬ್ಧವಿರುವ ಇತರ ಪ್ರಕಾರಗಳ ಆಸ್ತಿ ವಿಮೆ ಯಾವುದು ?**

ಉಪಲಬ್ಧವಿರುವ ಇತರ ಕೆಲವು ಆಸ್ತಿ ವಿಮೆ ಎಂದರೆ, ಇಲೆಕ್ಟ್ರಾನಿಕ್ ಇಕ್ವಿಪ್‌ಮೆಂಟ್ ವಿಮೆ, ಮಶಿನರಿ ಬ್ರೇಕ್ ಡೌನ್ ವಿಮೆ ಇತ್ಯಾದಿ ಇಂಜಿನಿಯರಿಂಗ್ ವಿಮಾ ಪಾಲಿಸಿಗಳಾಗಿವೆ.





## 3. ಆಸ್ತಿ ವಿಮೆಯ ಬಗ್ಗೆ ಆಗಾಗ ಕೇಳಲಾಗುವ ಪ್ರಶ್ನೆಗಳು

**ಪ್ರ : ಆಸ್ತಿ ವಿಮಾ ಪಾಲಿಸಿಯನ್ನು ಖರೀದಿಸಲು ಯಾವ ಆವಶ್ಯಕತೆ ಇದೆ ?**

ಉ: ಪಾಲಿಸಿಯ ಪ್ರಸ್ತಾವಿತರು ಮೊತ್ತ ಮೊದಲಿಗೆ ವಿಮೆಯ ಸಲುವಾಗಿ ಪ್ರಸ್ತಾಪಿಸಲಾಗುವ ಆಸ್ತಿಯ ಮೇಲೆ ಆಸಕ್ತಿಯನ್ನು ಹೊಂದಿರಬೇಕು ಅಂದರೆ ಅವನು/ಅಥವಾ ಅವಳು ಇಂತಹ ಆಸ್ತಿಗೆ ಹಾನಿಯಾದರೆ ಆರ್ಥಿಕ ನಷ್ಟವನ್ನು ಅನುಭವಿಸಬೇಕು. ಎರಡನೆಯದಾಗಿ, ಪ್ರಸ್ತಾವಿತರು ಒಂದು ಪ್ರಸ್ತಾವ ಫಾರ್ಮನ್ನು (ಇದನ್ನು ಯಾರೇ ಇನ್‌ಶೂರರ ವೆಬ್‌ಸೈಟ್ ಅಥವಾ ಕಚೇರಿಯಿಂದ ಪಡೆದುಕೊಳ್ಳಬಹುದು) ಸಲ್ಲಿಸಬೇಕು. ಪ್ರಸ್ತಾವ ಫಾರ್ಮ್ ವಿಮೆ ಮಾಡಿಸಿಕೊಂಡಿರುವವರ ಅತ್ಯುತ್ತಮ ತಿಳುವಳಿಕೆಯಂತೆ ನಿಜವಾಗಿರುವ ಮತ್ತು ಪ್ರಸ್ತಾವಿತರಿಗೆ ಪ್ರಸ್ತುತವೆಂದು ಅನ್ನಿಸಬಹುದಾದ ಎಲ್ಲಾ ಮತ್ತು ಇತರ ಮಾಹಿತಿಯನ್ನು ಒಳಗೊಂಡಿರಬೇಕು.

**ಪ್ರ : ಬೇರೆ ಬೇರೆ ಪ್ರಕಾರಗಳ ಆಸ್ತಿ ವಿಮಾ ಪಾಲಿಸಿಗಳಾವುವು ?**

ಉ : ಅತ್ಯಂತ ಜನಪ್ರಿಯವಾದುದೆಂದರೆ ಸ್ಟ್ಯಾಂಡರ್ಡ್ ಫಯರ್ ಆಂಡ್ ಅಲ್ಯಾಡ್ ಪೆರಿಲ್ಸ್ ಪಾಲಿಸಿಗಳಾಗಿದ್ದು ಇವು ಬೆಂಕಿ, ದೊಂಬಿ, ನೆರೆ ಮತ್ತು ಚಂಡಮಾರುತ ಹೀಗೆ ಆಸ್ತಿಯು ಒಡ್ಡಲ್ಪಡುವ ಹೆಚ್ಚಿನ ಅಪಾಯಗಳಿಗೆ ಸುರಕ್ಷೆಯನ್ನು ಒದಗಿಸುತ್ತದೆ. ಕಳ್ಳತನ ಮತ್ತು ಕಳವಿನಿಂದಾಗಿ ಸದ್ಯದ ಆಸ್ತಿಯ ನಷ್ಟವನ್ನು ಬರ್ಗ್ಲರಿ ಆಂಡ್ ಹೌಸ್ ಬ್ರೇಕಿಂಗ್ ವಿಮಾ ಪಾಲಿಸಿಯಲ್ಲಿ ಒಳ ಪಡಿಸಬಹುದು. ಅಮೂಲ್ಯ ವಸ್ತುಗಳನ್ನು ಆಲ್ ರಿಸ್ಕ್ ಪಾಲಿಸಿಗಳಡಿಯಲ್ಲಿ (ಎಲ್ಲಾ ಅಫಾಯಗಳ ಪಾಲಿಸಿ) ಒಳಪಡಿಸಬಹುದು ಮತ್ತು ಮನೆ ಮಾಲೀಕರು ಮತ್ತು ಅಂಗಡಿ ಮಾಲೀಕರಿಗಾಗಿ ಪ್ಯಾಕೇಜ್ ಪಾಲಿಸಿಗಳೂ ಇವೆ.

**ಪ್ರ: ವಿಮಾ ಮೊತ್ತವನ್ನು ಹೇಗೆ ನಿಗದಿಗೊಳಿಸಲಾಗುತ್ತದೆ ?**

ಉ: ಸಾಮಾನ್ಯವಾಗಿ ಎರಡು ವಿಧಾನಗಳಿವೆ. ಒಂದು ಮಾರುಕಟ್ಟೆ ಮೌಲ್ಯ (ಎಮ್‌ವಿ) ಹಾಗೂ ಮತ್ತೊಂದು ರಿಇನ್‌ಸ್ಟೇಟ್‌ಮೆಂಟ್ ಮೌಲ್ಯ (ಆರ್‌ಐವಿ). ಎವಮ್‌ವಿಯ ಪ್ರಸಂಗದಲ್ಲಿ, ನಷ್ಟ ಸಂಭವಿಸಿದಲ್ಲಿ ಆಸ್ತಿಯ ವಯಸ್ಸನ್ನು ಅವಲಂಬಿಸಿ ಅದಕ್ಕೆ ಇಳಿತಾಯವನ್ನು (ಡಿಪ್ರೀಸಿಯೇಶನನ್ನು) ವಿಧಿಸಲಾಗುತ್ತದೆ. ಈ ವಿಧಾನದಲ್ಲಿ, ಬದಲಿ ಸಾಮಾಗ್ರಿಯನ್ನು ಖರೀದಿಸಲು ಬೇಕಾಗುವ ಸಾಕಷ್ಟು ಮೊತ್ತವನ್ನು ವಿಮೆ ಮಾಡಿಸಿಕೊಂಡವರಿಗೆ ನೀಡಲಾಗುವುದಿಲ್ಲ.

ಆರ್‌ಐವಿ ವಿಧಾನದಲ್ಲಿ, ಎಸ್.ಐ.ಯ ಮಿತಿಗೊಳಪಟ್ಟು ವಿಮಾ ಕಂಪೆನಿಯು ಬದಲಾಯಿಸುವ ವೆಚ್ಚವನ್ನು ಪಾವತಿಸುತ್ತದೆ. ಈ ವಿಧಾನದಲ್ಲಿ ಇಳಿತಾಯವನ್ನು ವಿಧಿಸಲಾಗುವುದಿಲ್ಲ. ಒಂದು ನಿಬಂಧನೆಯೆಂದರೆ ದಾವೆಯನ್ನು ಪಡೆಯಲು ಹಾನಿಗೊಂಡ ಆಸ್ತಿಯನ್ನು ದುರುಸ್ತಿಗೊಳಿಸಬೇಕು/ ಬದಲಾಯಿಸಬೇಕು. ಆರ್‌ಐವಿ ವಿಧಾನವನ್ನು ಸ್ಥಿರ ಆಸ್ತಿಗಳಿಗೆ ಮಾತ್ರ ಅನುವುಮಾಡಲಾಗುತ್ತದೆ ಮತ್ತು ಸರಕು ಮತ್ತು ಪ್ರಕ್ರಿಯೆಯಲ್ಲಿರುವ ಸರಕು ಮುಂತಾದ ಇತರ ಆಸ್ತಿಗಳಿಗೆ ಅನ್ವಯಿಸುವುದಿಲ್ಲವೆಂಬುದನ್ನು ಗಮನಿಸಬೇಕಾಗುತ್ತವೆ.

**ಪ್ರ: ಬೆಂಕಿ ವಿಮಾ ಪಾಲಿಸಿಯ ವೆಚ್ಚವೆಷ್ಟು ?**

ಉ. ಬೆಂಕಿ ವಿಮಾ ಪಾಲಿಸಿಯ ವೆಚ್ಚ ಅಥವಾ ಪ್ರೀಮಿಯಂ ಈ ಕೆಳಗಿನವುಗಳನ್ನು ಅವಲಂಬಿಸಿರಬಹುದು

- ಸುರಕ್ಷೆ ಒದಗಿಸಲಾದುಕ್ಕಿರುವ ಅಪಾಯ
- ಒಳಗೊಂಡಿರುವ ಸಾಮಾಗ್ರಿಗಳ ಮೌಲ್ಯ
- ವಿಮೆಗಾಗಿ ಪ್ರಸ್ತಾವಿತ ಸ್ಥಳದ ಬಳಕೆ



- ವಿಮೆಗಾಗಿ ಪ್ರಸ್ತಾವಿಸಲಾದ ಜಾಗದ ಸ್ಥಳೀಯ ವಿವರಗಳು ಇತ್ಯಾದಿ
- ಕಟ್ಟಡದ ನಿರ್ಮಾಣ ಮತ್ತು ಅದರಲ್ಲಿನ ವಾಸ್ತವ್ಯ

ನಾನ್-ಲೈಫ್ ವಿಮಾ ವಿಭಾಗದ ಡಿ-ಟ್ಯಾರಿಫಿಂಗ್‌ನ ಪರಿಣಾಮವಾಗಿ (ಐಆರ್‌ಡಿಎಯಿಂದ ನಿಗದಿಗೊಳಿಸಲಾದ ಪ್ರೀಮಿಯಂ ದರಗಳಿರುವ ಮೋಟಾರ್ ಮೂರನೇ ಪಾರ್ಟಿ ವಿಮೆಯ ಹೊರತಾಗಿ) ಪ್ರತಿಯೊಂದೂ ಇನ್‌ಶೂರರರಿಂದ ವಿಧಿಸಲಾಗುವ ಪ್ರೀಮಿಯಂ ದರಗಳಲ್ಲಿ ವ್ಯಸ್ಯಾಸವಿರಬಹುದು. ಆದಾಗ್ಯೂ, ಅದನ್ನು ಫೈಲ್ ಆಂಡ್ ಯೂಸ್ ಕಾರ್ಯವಿಧಿಯಡಿಯಲ್ಲಿ ಐಆರ್‌ಡಿಎಯಲ್ಲಿ ಫೈಲ್ ಮಾಡಿರಬೇಕು.

**ಪ್ರ: ವಾಸ್ತವ್ಯದ ಜಾಗ ಅಥವಾ ಕಚೇರಿ ಅಥವಾ ಉದ್ಯಮಗಳಲ್ಲಿನ ಆಸ್ತಿಯ ಮೌಲ್ಯವನ್ನು ಹೇಗೆ ಕಂಡುಕೊಳ್ಳಲಾಗುತ್ತದೆ ?**

ಉ: ವಾಸ್ತವ್ಯದ ಜಾಗಗಳನ್ನು ಹೊರತುಪಡಿಸಿ ಔದ್ಯೋಗಿಕ ಘಟಕಗಳು ಅಥವಾ ಕಚೇರಿಗಳು ಆಸ್ತಿಯ ಮೌಲ್ಯವನ್ನು ತೋರಿಸುವ ಖಾತೆಗಳ ಪುಸ್ತಕಗಳನ್ನು ಇರಿಸಿಕೊಳ್ಳುತ್ತವೆ, ಅದ್ದ ರಿಂದ ವಿಮಾ ಮೊತ್ತವನ್ನು ಲೆಕ್ಕ ಮಾಡಲು ಯಾವುದೇ ಸಮಸ್ಯೆ ಇರುವುದಿಲ್ಲ. ವಾಸ್ತವ್ಯದ ಸ್ಥಳಗಳಾದರೆ, ಪೀಠೋಪಕರಣ ಮತ್ತು ಫಿಕ್ಸ್‌ಚರ್, ಬಟ್ಟೆಬರೆ, ಬೆಡ್‌ಲಿನಿನ್, ಅಡುಗೆ ಮನೆಯ ಉಪಕರಣ, ಇಲೆಕ್ಟ್ರಾನಿಕ್ ಸಾಧನ ಮುಂತಾದ ವಿಶಾಲ ವಿಭಾಗದಡಿಯಲ್ಲಿರುವ ಆಸ್ತಿಗಳ ಸರಕುಗಳನ್ನು ಪರಿಗಣಿಸಬೇಕು ಮತ್ತು ವಿಮಾ ಮೊತ್ತವನ್ನು ಕಂಡುಕೊಳ್ಳಬೇಕು.

**ಪ್ರ : ನಾನೇಕೆ ನನ್ನ ಕಟ್ಟಡಕ್ಕೆ ವಿಮೆ ಮಾಡಿಸಿಕೊಳ್ಳಬೇಕು ? ಬೆಂಕಿಯು ನನ್ನ ಕಟ್ಟಡಕ್ಕೆ ಸಂಭಾವ್ಯ ಯಾವುದೇ ಹಾನಿ ಉಂಟುಮಾಡಲಾರದು.**

ಉ: ಬೆಂಕಿ ಮತ್ತು ಇತರ ಅಪಾಯಗಳು (ಸಾಮಾನ್ಯವಾಗಿ ಬೆಂಕಿ ವಿಮೆಯಲ್ಲಿ

ಒಳಗೊಂಡಿರುವಂಥಾದ್ದು) ಕಟ್ಟಡಕ್ಕೆ ನಷ್ಟ/ಹಾನಿಯನ್ನುಂಟು ಮಾಡಬಹುದು. ಬಹುಮಹಡಿ ಕಟ್ಟಡಗಳನ್ನು ಸಂಪೂರ್ಣವಾಗಿ ನಾಶಗೊಳಿಸಿದ ಬೆಂಕಿ ಅನಾಹುತಗಳಿವೆ. ನೆರೆಗಳು ಕೂಡಾ ವಿನಾಶಕಾರಿ ನಷ್ಟಗಳನ್ನು ಉಂಟುಮಾಡಬಹುದು. ಅಂತೆಯೇ ದೊಂಬಿ, ಭಯೋತ್ಪಾದಕ ಚಟುವಟಿಕೆಗಳು ಕೂಡಾ ಮಾನವನ ಜೀವ ಹಾಗೂ ಆಸ್ತಿಗೆ ಅಪಾರ ಹಾನಿ ಉಂಟುಮಾಡಬಹುದು.

ಪ್ರ: **ನಾನು ಮಧ್ಯಾವಧಿಯಲ್ಲಿ ಪಾಲಿಸಿಯನ್ನು ರದ್ದುಪಡಿಸುವಂತೆ ಕೇಳಿಕೊಳ್ಳಬಹುದೇ ? ನಾನು ಪ್ರೀಮಿಯಂನಲ್ಲಿ ಯಾವುದೇ ಮರು ಪಾವತಿಯನ್ನು ಪಡೆಯುವೆನೇ ?**

ಉ: ಹೌದು.

**ವಿಮೆ ಮಾಡಿಸಿಕೊಂಡವರ ಆಯ್ಕೆಯಂತೆ** : ಅಲ್ಪಾವಧಿಯ ಪ್ರೀಮಿಯಂನ್ನು ಇರಿಸಿಕೊಂಡು ಬಾಕಿ ಯಾವುದಾದರೂ ಇದ್ದರೆ ಮರುಪಾವತಿಸಲಾಗುತ್ತದೆ.

**ಇನ್‌ಶೂರರ ಆಯ್ಕೆಯಂತೆ** : ಪ್ರಮಾಣಾನುಸಾರ ಪ್ರೀಮಿಯಂನ್ನು ಮರಳಿಸಲಾಗುತ್ತದೆ.

ಪ್ರ: **ನಷ್ಟ ಸಂಭವಿಸಿದಲ್ಲಿ, ವಿಮೆ ಮಾಡಿಸಿಕೊಂಡವರ ಬಾಧ್ಯತೆಗಳಾವುವು ?**

ಉ: ವಿಮೆ ಮಾಡಿಸಿಕೊಂಡಿರುವ ಪ್ರತಿಯೊಬ್ಬನೂ ತಾನು ವಿಮೆ ಮಾಡಿಸಿಕೊಂಡಿಲ್ಲ ಎಂದು ವರ್ತಿಸುವನೆಂದು ನೀರಿಕ್ಷಿಸಲಾಗುತ್ತದೆ. ನಷ್ಟವನ್ನು ತಡೆಗಟ್ಟಲು/ಅಧಿಕವಾಗದಂತೆ ಮಾಡಲು ಎಲ್ಲಾ ಮುಂಜಾಗರೂಕತೆಗಳನ್ನೂ ತೆಗೆದುಕೊಳ್ಳಬೇಕು. ವಿಮಾ ಕಂಪೆನಿಗೆ ತಿಳಿಸಬೇಕಾಗಿದ್ದು ಹಾನಿಯನ್ನು ಪರಿಶೀಲಿಸಲು ಅವರಿಗೆ ಅವಕಾಶ



ನೀಡಬೇಕು. ಅಗ್ನಿ ಶಾಮಕ ದಳದವರಿಗೆ ಮಾಹಿತಿ ನೀಡಿರಿ, ಅವರು ಬೆಂಕಿಯನ್ನು ನಂದಿಸಲು ಸಹಾಯ ಮಾಡುತ್ತಾರೆ. ಬೆಂಕಿಯನ್ನು ನಂದಿಸುವ ಕಾಲಾವಧಿಯಲ್ಲಿ ನೀರಿನಿಂದಾಗಿ ವಿಮೆ ಮಾಡಿಸಿರುವ ಇತರ ಯಾವುದೇ ಆಸ್ತಿಗಾಗುವ ಹಾನಿಗಾಗಿ ವಿಮಾ ಕಂಪೆನಿಯು ಹಣಪಾವತಿಸುತ್ತದೆ. ನಷ್ಟವನ್ನು ಪರಿಶೀಲಿಸುವಾಗ ಅಥವಾ ಮೌಲ್ಯಾಂಕನ ಮಾಡುವಾಗ ಸರ್ವೇಯರರಿಗೆ ಸಹಕಾರ ನೀಡಿರಿ. ಸರ್ವೇಯರರು ಬರುವುದು ವಿಳಂಬವಾಗುವ ಸಾಧ್ಯತೆಯಿದ್ದರೆ ಫೋಟೋಗ್ರಾಫ್‌ಗಳನ್ನು ತೆಗೆದುಕೊಳ್ಳಿರಿ ಮತ್ತು ಪರಿಣಾಮಗೊಂಡಿರದ ಆಸ್ತಿಗಳನ್ನು ಸುರಕ್ಷಿತ ಜಾಗಕ್ಕೆ ವರ್ಗಾಯಿಸಿರಿ. ನಿಮ್ಮ ದಾವೆಯನ್ನು ಬೆಂಬಲಿಸಲು ಇನ್‌ಶೂರರಿಗೆ ಆವಶ್ಯವಾದ ಪೂರ್ಣಗೊಳಿಸಲಾದ ದಾವೆ ಫಾರ್ಮ್ ಮತ್ತು ದಸ್ತಾವೇಜನ್ನು ನೀಡಿರಿ. ದುರುಸ್ತಿ ಬದಲಾಯಿಸಿದ ನಂತರ ಇನ್‌ಶೂರರಿಗೆ ಬಿಲ್‌ಗಳನ್ನು ಸಲ್ಲಿಸಿರಿ.

ಪ್ರ: **ನಾನು ಅಧಿಕ ಮೌಲ್ಯಕ್ಕಾಗಿ ವಿಮೆ ಮಾಡಿಸಿಕೊಂಡರೆ, ನಾನು ಅಧಿಕ ದಾವೆ ಮೊತ್ತವನ್ನು ಪಡೆಯುವೆನೇ ?**

ಉ: ಇಲ್ಲ. ನೀವು ಬೆಂಕಿ ವಿಮಾ ಪಾಲಿಸಿಗಾಗಿ ಅರ್ಜಿ ಸಲ್ಲಿಸುವಾಗ, ವಿಮೆ ಮಾಡುವ ಸರಿಯಾದ ಮೊತ್ತವನ್ನು ಪಡೆಯಲು ಮಾಡಿಕೊಳ್ಳುವ ವಿಮೆಯನ್ನು ಅವಲಂಬಿಸಿ ಆಸ್ತಿಯ ಪ್ರಸಕ್ತ ಮಾರುಕಟ್ಟೆ ಮೌಲ್ಯವನ್ನು ಅಥವಾ ಆಸ್ತಿಯ ಪುನರ್ ಸ್ಥಾಪನಾ ಮೌಲ್ಯವನ್ನು ನಿಖರವಾಗಿ ಲೆಕ್ಕ ಮಾಡಬೇಕು. ಸುರಕ್ಷೆಯನ್ನು ಪಡೆದಿರುವುದಕ್ಕೆ ನಷ್ಟ ಅಥವಾ ಹಾನಿ ಉಂಟಾದಾಗ, ಪಾವತಿಸಲಾಗುವ ಪರಿಹಾರವು ಆಸ್ತಿಯು ಸಾಕಷ್ಟು ಪ್ರಮಾಣದಲ್ಲಿ ವಿಮೆಯನ್ನು ಹೊಂದಿದೆಯೇ ಅಥವಾ ಇಲ್ಲವೇ ಎಂಬುದನ್ನು ಅವಲಂಬಿಸಿರುತ್ತದೆ. ಒಂದು ವೇಳೆ ವಿಮೆಯ ಮೊತ್ತವು ಅತ್ಯಧಿಕವಿದ್ದರೆ, ಅನಾವಾಶ್ಯಕ ಅಧಿಕ ಪ್ರೀಮಿಯಂ ಸಂದಾಯವಾಗುತ್ತದೆ,

ಒಂದು ವೇಳೆ ವಿಮೆಯ ಮೊತ್ತವು ಸಾಕಷ್ಟಿಲ್ಲದಿದ್ದರೆ ನೀವು ಮಾರುಕಟ್ಟೆ ಮೌಲ್ಯದ ಪ್ರಮಾಣಾನುಸಾರ ಮಾತ್ರ ಮೊತ್ತಗಳನ್ನು ಪಡೆಯುವಿರಿ.

**ಪ್ರ: ಆಭರಣ, ಅಲಂಕಾರವಸ್ತು ಮತ್ತು ಕಲಾ ಸಾಮಾಗ್ರಿಗಳನ್ನು ಸಾಮಾನ್ಯ ಬೆಂಕಿ ಪಾಲಿಸಿಯಲ್ಲಿ ಒಳಪಡಿಸಬಹುದೇ ?**

ಉ: ಇನ್‌ಶೂರರು ಪೂರ್ವ ಸಮ್ಮತಿಯನ್ನು ನೀಡಿರದಿದ್ದರೆ, ಸಾಮಾನ್ಯ ಬೆಂಕಿ ವಿಮಾ ಪಾಲಿಸಿಯು ಆಭರಣ, ಅಲಂಕಾರ ವಸ್ತು, ಕಲಾ ಸಾಮಾಗ್ರಿ, ಸ್ಕ್ರಿಪ್ಟ್, ಡಾಕ್ಯುಮೆಂಟರಿ ಮಾಹಿತಿ, ಕಂಪ್ಯೂಟರ್ ಸಿಸ್ಟಮ್ ಮಾಹಿತಿ, ಶೇರುಗಳು ಮತ್ತು ಸ್ಟಾಕ್, ನಗದು ಮುಂತಾದ ವಸ್ತುಗಳನ್ನು ಒಳಗೊಂಡಿರುವುದಿಲ್ಲ. ಇವನ್ನು ಒಂದು ನಿರ್ದಿಷ್ಟ ಕೋರಿಕೆಯ ಮೇರೆಗೆ ಮತ್ತು ಆವಶ್ಯಕವಾದಲ್ಲಿ ಮೌಲ್ಯಾಂಕನಕ್ಕೆ ಒಳಪಟ್ಟು ಒಳಪಡಿಸಬಹುದು.

**ಪ್ರ: ನಾನು ನನ್ನ ಕಟ್ಟಡವನ್ನು ಒಳಗೊಂಡಿರುವ ಒಂದು ವಿಮಾ ಪಾಲಿಸಿಯನ್ನು ತೆಗೆದುಕೊಂಡಿರುವೆನು. ನನಗೆ ವ್ಯಾಪಾರಕ್ಕೆ ಸಾಲ ನೀಡಿದ ಬ್ಯಾಂಕ್ ಕೂಡಾ ಪ್ರತ್ಯೇಕವಾಗಿ ವಿಮೆಯನ್ನು ತೆಗೆದುಕೊಂಡಿದೆ. ಅದೇ ಆಸ್ತಿಯನ್ನು ಒಳಗೊಂಡ ಎರಡೂ ಪಾಲಿಸಿಗಳೂ ಊರ್ಜಿತದಲ್ಲಿವೆ. ದಾವೆ ಉಂಟಾದಲ್ಲಿ ಏನಾಗುತ್ತದೆ ?**

ಉ: ದಾವೆ ಉಂಟಾದಲ್ಲಿ ಕಾಂಟ್ರಿಬ್ಯೂಷನ್‌ನ ನೀತಿಯಂತೆ ಪ್ರತಿಯೊಬ್ಬ ಇನ್‌ಶೂರರೂ ನಷ್ಟದ ಮೊತ್ತವನ್ನು ಅವರ ಆಯಾಯ ಪಾಲಿಸಿಗಳಡಿಯಲ್ಲಿ ವಿಮಾ ಮೊತ್ತದ ಮಾಶಯದಂತೆ ನೀಡುತ್ತವೆ. ಇಂಡೆಮ್ನಿಟಿಯ ನೀತಿಯ ಉದ್ದೇಶವು ವಿಮೆ ಮಾಡಿಸಿಕೊಂಡವರನ್ನು ಹೀಗಾಗುವ ಮೊದಲೇ ಇದ್ದ ಜಾಗದಲ್ಲಿ ಇರಿಸುವುದಾಗಿದೆ. ಪ್ರತಿಯೊಂದೂ ಪಾಲಿಸಿಯಡಿಯಲ್ಲಿ ಪೂರ್ಣ ಮೊತ್ತದ ದಾವೆ ಸಲ್ಲಿಸಲು ವಿಮೆ ಮಾಡಿಸಿಕೊಳ್ಳುವವರನ್ನು ತಡೆಗಟ್ಟಲಾಗುತ್ತದೆ.



ವಿಮಾ ಕಂಪೆನಿಯು ಇಳಿತಾಯ, ಪಾಲಿಸಿ ಎಕ್ಸೆಸ್ ಇತ್ಯಾದಿಗೆ ಒಳಪಟ್ಟು ಆದ ವಾಸ್ತವಿಕ ನಷ್ಟಕ್ಕೆ ಮಾತ್ರ ಇಂಡೆಮ್ನಿ ಫೈ ಮಾಡುತ್ತದೆ ಮತ್ತು ನಷ್ಟದಿಂದ ಲಾಭಗಳಿಸಲು ಅನುವು ಮಾಡುವುದಿಲ್ಲ.

ಪ್ರ: ಸಾಲ್ವೇಜ್‌ನ ಪ್ರಸ್ತುತತೆ ಏನು ?

ಉ: ಬೇರೆ ಬೇರೆ ಪ್ರಕಾರಗಳ ವಿಮಾ ಪಾಲಿಸಿಗಳ ದಾವೆಯ ಪ್ರಸಂಗದಲ್ಲಿ ಭಾಗಶ: ಹಾನಿಗೊಂಡ ಸಾಮಾಗ್ರಿ ಅಥವಾ ಕಾರು ಅಥವಾ ಯಾವುದೇ ಮಶಿನರಿ ಅಥವಾ ಇತರ ಯಾವುದೇ ಆಸ್ತಿಯ ಭಗ್ನಾವಶೇಷವನ್ನು ಒಟ್ಟು ನಷ್ಟದ ಆಧಾರದಲ್ಲಿ ತೀರಿಸುವುದನ್ನು ''ಸಾಲ್ವೇಜ್'' ಎನ್ನಲಾಗುತ್ತದೆ. ಸಂಪೂರ್ಣ ಮೊತ್ತಕ್ಕಾಗಿ ದಾವೆ ಮೊತ್ತವನ್ನು ತೀರಿಸಿದ ನಂತರ ಸಾಲ್ವೇಜ್ ವಿಮಾ ಕಂಪೆನಿಯ ಸೊತ್ತಾಗುತ್ತದೆ. ಸಾಮಾನ್ಯವಾಗಿ ಸಾಲ್ವೇಜ್ ಕೆಲಸವನ್ನು ವಿಮಾ ಕಂಪೆನಿಯು ಸರ್ವೇಯರರಿಗೆ ವಹಿಸಿಕೊಡುತ್ತಿದ್ದು, ಅವರು ಸಾಲ್ವೇಜ್ ವಿಲೇವಾರಿಯ ಕಾರ್ಯವಿಧಿಯನ್ನು ಪಾಲನೆಗೊಳಪಟ್ಟು ನಷ್ಟದ ಮೌಲ್ಯ ಮಾಪನ ಮಾಡುತ್ತಾರೆ. ಸಾಲ್ವೇಜ್ ವಿಲೇವಾರಿಯಿಂದ ದೊರೆತ ಮೊತ್ತವನ್ನು ಇನ್‌ಶೂರರು ಪಾವತಿಸಿದ ನಷ್ಟಗಳಿಗೆ ಸರಿಹೊಂದಿಸಲಾಗುತ್ತದೆ.

**ಪ್ರ: ನಾನು ನನ್ನ ಸರಕಿಗೆ ಸಾಗಾಣಿಕೆಯ ಅಪಾಯದ ವಿರುದ್ಧ ಸುರಕ್ಷೆ ಒದಗಿಸಲು ಇಚ್ಛಿಸುತ್ತೇನೆ. ನಾನು ಯಾವ ಪಾಲಿಸಿಯನ್ನು ತೆಗೆದುಕೊಳ್ಳಬೇಕು.**

ಉ: ಮರೀನ್ ಕಾರ್ಗೊ ಪಾಲಿಸಿಯು ಸಾಗಾಟದ ಅಪಾಯಗಳ ವಿರುದ್ಧ ಸರಕುಗಳಿಗೆ ಸುರಕ್ಷೆ ಒದಗಿಸುತ್ತದೆ. ಉದಾಹರಣೆಗಾಗಿ ನೀವು ನಿಮ್ಮ ಮನೆ ಸಾಮಾಗ್ರಿಗಳನ್ನು ಒಂದು ಸ್ಥಳದಿಂದ ಇನ್ನೊಂದಕ್ಕೆ ಸಾಗಿಸುತ್ತಿದ್ದರೆ ನೀವು ಈ ಪಾಲಿಸಿಯನ್ನು ತೆಗೆದುಕೊಳ್ಳಬಹುದು. ನೀವು ಒಂದೋ

'ಬೇಸಿಕ್ ಕವರ್' ಅಥವಾ ಆಲ್ ರಿಸ್ಕ್‌ಗಳನ್ನು ಆಯ್ಕೆ ಮಾಡಬಹುದು. ನಂತರದ್ದು ವಿಶಾಲ ರೀತಿಯ ಸುರಕ್ಷೆಯನ್ನು ಒದಗಿಸುತ್ತದೆ. ನೀವೇನು ಖರೀದಿಸುತ್ತಿದ್ದೀರಿ ಎಂಬುದನ್ನು ತಿಳಿದುಕೊಳ್ಳಲು ದಯವಿಟ್ಟು ಪಾಲಿಸಿಯ ನಿಯಮ ಮತ್ತು ನಿಬಂಧನೆಗಳನ್ನು ಓದಿರಿ.

ಪ್ರ: **ಮರೀನ್ ಕಾರ್ಗೋ ವಿಮೆಯ ವ್ಯವಸ್ಥೆಯನ್ನು ಯಾರು ಮಾಡುತ್ತಾರೆ ಖರೀದಿಸುವವರೇ ಅಥವಾ ಮಾರಾಟ ಮಾಡುವವರೇ ? ಅಥವಾ ಇಬ್ಬರಿಗೂ ಸ್ವಲ್ಪ ಸುರಕ್ಷೆ ಬೇಕೇ ?**

ಉ: ಇದು ಇಬ್ಬರ ನಡುವೆ ಮಾಡುವ ಮಾರಾಟ ಒಪ್ಪಂದವನ್ನು ಅವಲಂಬಿಸಿದೆ. ಫ್ರೀ ಆನ್ ಬೋರ್ಡ್ (ಎಫ್‌ಒಬಿ) ಕಾಸ್ಟ್ ಆಂಡ್ ಫ್ರೈಟ್ (ಸಿ ಆಂಡ್ ಎಫ್) ಕಾಸ್ಟ್ ಇನ್‌ಶೂರೆನ್ಸ್ ಆಂಡ್ ಫ್ರೈಟ್ (ಸಿಐಎಫ್) ಇತ್ಯಾದಿ ಮಾರಾಟ ನಿಬಂಧನೆಗೆ, ವಿಮೆಯ ವ್ಯವಸ್ಥೆ ಮಾಡುವ ಜವಾಬ್ದಾರಿಯಲ್ಲಿ ವ್ಯತ್ಯಾಸವಿರುತ್ತದೆ.

ಪ್ರ: **ನಾನು ನನ್ನ ಚಿನ್ನಾಭರಣಗಳಿಗೆ ಸುರಕ್ಷೆ ಒದಗಿಸಲು ಇಚ್ಚಿಸುತ್ತೇನೆ. ನಾನು ಯಾವ ಪಾಲಿಸಿಯನ್ನು ತೆಗೆದುಕೊಳ್ಳಬೇಕು ?**

ಉ: ಆಭರಣವನ್ನು ಒಳಪಡಿಸಲು ಇನ್‌ಶೂರರು ಆಲ್ ರಿಸ್ಕ್ಸ್ ಪಾಲಿಸಿಯನ್ನು ನೀಡುತ್ತಿದ್ದಾರೆ. ನಿಮ್ಮ ಆಭರಣದ ಮೌಲ್ಯಾಂಕನವನ್ನು ಸರಿಯಾಗಿ ಮಾಡಲಾಗಿದೆ ಎಂದು ನೀವು ಖಾತ್ರಿ ಮಾಡಿಕೊಳ್ಳಲೇ ಬೇಕಲ್ಲದೆ ದಾವೆ ಉಂಟಾದಲ್ಲಿ ಮೌಲ್ಯಾಂಕನದ ಪುರಾವೆಯನ್ನು ನೀಡಲು ನಿಮಗೆ ಸಾಧ್ಯವಿರಬೇಕು. ಆಲ್ ರಿಸ್ಕ್ಸ್ ಪಾಲಿಸಿಯು ಹೊರತು ಪಡಿಸುವಿಕೆಗಳನ್ನು ಕೂಡ ಒಳಗೊಂಡಿದೆ, ಆದ್ದರಿಂದ ನಿಯಮ ಮತ್ತು ನಿಬಂಧನೆಗಳನ್ನು ಸರಿಯಾಗಿ ಓದಿರಿ.

ಪ್ರ: **ನಾನು ಮನೆಯಿಂದ ದೂರವಿರುವಾಗ ನನ್ನ ಮನೆಯ ಸಾಮಾಗ್ರಿಗಳಿಗೆ**



Bima Bemisaal

**ಕಳವಿನ ವಿರುದ್ಧ ಸುರಕ್ಷೆ ಪಡೆಯಬಯಸುತ್ತೇನೆ. ನಾನು ಬರ್ಗ್‌ಲರಿ ವಿಮಾ ಪಾಲಿಸಿಯನ್ನು ಪಡೆಯಬಹುದೇ ?**

ಉ: ಬರ್ಗ್‌ಲರಿ ವಾಮಾ ಪಾಲಿಸಿಯು ಕಳವಿನ ವಿರುದ್ಧ ಸಾಮಾಗ್ರಿಗಳಿಗೆ ಸುರಕ್ಷೆಯನ್ನು ನೀಡುತ್ತದೆ. ಬರ್ಗ್‌ಲರಿ ವಿಮಾ ಪಾಲಿಸಿಯು ಕಳ್ಳತನದ ವಿರುದ್ಧವೂ ಸುರಕ್ಷೆಯನ್ನು ವಿಸ್ತರಿಸಬಹುದು. ನೀವು ಮನೆಯಲ್ಲಿ ವಾಸಿಸುತ್ತಿಲ್ಲ ಮತ್ತು ವಿಮಾ ಕಂಪೆನಿಯು ಮನೆಯಲ್ಲಿ ಯಾರೂ ಇಲ್ಲದಿದ್ದಾಗಲೂ ಸುರಕ್ಷೆಯನ್ನು ನೀಡಲು ನಿರ್ದಿಷ್ಟವಾಗಿ ವ್ಯಾಖ್ಯಾನಿತ ಅವಧಿಗಿಂತ ಆಚೆ ಮನೆಯಲ್ಲಿ ಯಾರೂ ವಾಸಿಸುತ್ತಿಲ್ಲವಾದರೆ ಬರ್ಗಲರಿ ಪಾಲಿಸಿಯು ಸಾಮಾನ್ಯವಾಗಿ ರದ್ದಾಗುತ್ತದೆ. ನೀವು ಮನೆಯಿಂದ ದೂರವಿರುವಾಗ ಮಾತ್ರ ಪಾಲಿಸಿಯನ್ನು ಹೊಂದುವುದಕ್ಕಿಂತ ಸದಾ ಬರ್ಗ್‌ಲರಿ ಪಾಲಿಸಿಯನ್ನು ಹೊಂದಿರುವಿರಿ ಎಂಬುದನ್ನು ಖಾತ್ರಿ ಮಾಡಿಕೊಳ್ಳವುದು ಉತ್ತಮವಾಗಿದೆ. ಮನೆಗೆ ಬೀಗ ಹಾಕಿರುವಾಗ ಮಾತ್ರ ನೀವು ವಿಮೆ ಮಾಡಿಸಿಕೊಳ್ಳುವುದಾದರೆ, ಮಾತ್ರ ಆಗ ನಿಮಗೆ ಅಂತಹ ವಿಮೆ ಸಿಗಲಿಕ್ಕಿಲ್ಲ.

## ಪಾಲಿಸಿಧಾರಕರಿಗೆ ಸೇವೆ ಸಲ್ಲಿಸಲು ಐಆರ್‌ಡಿಎ ಇವರಿಂದ ನಿಗದಿಗೊಳಿಸಲಾದ ತಗಲುವ ಸಮಯ

| ಸೇವೆ | ಗರಿಷ್ಠ ಸಮಯ |
|---|---|
| **ಸಾಮಾನ್ಯ** | |
| ಪ್ರಸ್ತಾವವನ್ನು ಪ್ರೊಸೆಸ್ ಮಾಡುವುದು ಆವಶ್ಯಕತೆ/ ಪಾಲಿಸಿ ನೀಡಿಕೆ/ ರದ್ದು ಪಡಿಸುವಿಕೆ ಯನ್ನೊಳನೊಂಡು ನಿರ್ಧಾರವನ್ನು ತಿಳಿಸುವುದು | 15 ದಿನಗಳು |
| ಪ್ರಸ್ತಾವದ ಪ್ರತಿಯನ್ನು ಪಡೆದುಕೊಳ್ಳುವುದು | 30 ದಿನಗಳು |
| ಪಾಲಿಸಿ ನೀಡಿದ ನಂತರದ ಸೇವೆ - ದೋಷ ಪ್ರಸ್ತಾವದ ಡಿಪಾಸಿಟ್‌ನ ಹಿಂತಿರುಗಿಸುವಿಕೆಯ ಬಗ್ಗೆ ಕೋರಿಕೆಗಳು ಮತ್ತು ನಾನ್-ಕ್ಲೈಮ್ ಸಂಬಂಧಿತ ಸೇವೆಗಳ ಕೋರಿಕೆಗಳು | 10 ದಿನಗಳು |
| **ಜೀವ ವಿಮೆ** | |
| ಸರಂಡರ್ ಮೌಲ್ಯ/ ಆ್ಯನುಯಿಟಿ/ ಪೆನ್ಷನ್ ಪ್ರೊಸೆಸ್ ಮಾಡುವುದು. | 10 ದಿನಗಳು |
| ಪರಿಪಕ್ವತೆಯ ಕ್ಲೈಮ್ / ಸರ್ವೈವಲ್ ಲಾಭ ಪೆನಲ್ ಬಡ್ಡಿ ಪಾವತಿಸದಿರುದಂಥಾದ್ದು | 15 ದಿನಗಳು |
| ಕ್ಲೈಮ್‌ನ್ನು ಸಲ್ಲಿಸಿದ ನಂತರ ಕ್ಲೈಮ್‌ನ ಆವಶ್ಯಕತೆಗಳನ್ನು ತಿಳಿಸುವುದು | 15 ದಿನಗಳು |
| ತನಿಖೆಯ ಆವಶ್ಯಕತೆ ಇಲ್ಲದೆ ಮೃತ್ಯು ದಾವೆಗಳ ತೀರಿಕೆ | 30 ದಿನಗಳು |
| ತನಿಖೆಯ ಆವಶ್ಯಕತೆಯೊಂದಿಗೆ ಮೃತ್ಯುದಾವೆಯ ತೀರಣೆ/ ನಿರಾಕರಕೆ | 6 ತಿಂಗಳು |
| **ಸಾಮಾನ್ಯ ವಿಮೆ** | |
| ಸರ್ವೆ ರಿಪೊರ್ಟ್ ಸಲ್ಲಿಕೆ | 30 ದಿನಗಳು |
| ಇನ್‌ಶೂರರು ಸೇರಿಕೆ ವರದಿಯನ್ನು ಕೋರುವುದು. | 15 ದಿನಗಳು |
| ಮೊದಲ/ಸೇರಿಕೆ ಸರ್ವೇ ರಿಪೋರ್ಟ್‌ನ್ನು ಪಡೆದ ನಂತರ ದಾವೆಯ ತೀರಿಕೆ / ತಿರಸ್ಕರಿಸುವಿಕೆ | 30 ದಿನಗಳು |
| **ದೂರುಗಳು** | |
| ದೂರಗಳ ಸ್ವೀಕೃತಿಯ ದಾಖಲಾತಿ | 3 ದಿನಗಳು |
| ದೂರಿನ ನಿವಾರಣೆ | 15 ದಿನಗಳು |



## 5. ನಿಮ್ಮಲ್ಲಿ ದೂರುಗಳಿದ್ದರೆ

ಕನ್‌ಸ್ಯೂಮರ್ ಅಫೇರ್ಸ್ ಡಿಪಾರ್ಟ್‌ಮೆಂಟ್ ಆಫ್ ಇನ್‌ಶೂರೆನ್ಸ್ ರೆಗ್ಯುಲೇಟರಿ ಆಂಡ್ ಡೆವಲಪ್‌ಮೆಂಟ್ ಅಥಾರಿಟಿ (ಐಆರ್‌ಡಿಎ) ಇವರು ಸಮಗ್ರ ದೂರು ನಿರ್ವಹಣಾ ವ್ಯವಸ್ಥೆಯನ್ನು (ಐಜಿಎಮ್‌ಎಸ್) ಪರಿಚಯಿಸಿದ್ದು ಇದು ದೂರುಗಳ ನೋಂದಾವಣೆ ಮತ್ತು ಅದರ ತಾಜಾ ಸ್ಥಿತಿಯನ್ನು ತಿಳಿಯುವ ಒಂದು ಆನ್‌ಲೈನ್ ವ್ಯವಸ್ಥೆಯಾಗಿದೆ. ನೀವು ಮೊದಲಿಗೆ ನಿಮ್ಮ ದೂರನ್ನು ವಿಮಾ ಕಂಪೆನಿಯಲ್ಲಿ ನೋಂದಾಯಿಸಿಕೊಳ್ಳಬೇಕು ಮತ್ತು ಅದರ ನಿವಾರಣೆಯಿಂದ ನೀವು ತೃಪ್ತರಾಗದಿದ್ದರೆ ನೀವು ಅದನ್ನು www.igms.irda.gov.in ಇದನ್ನು ತಲಪುವ ಮೂಲಕ ಐಜಿಎಮ್‌ಎಸ್‌ನ ಮೂಲಕ ಐಆರ್‌ಡಿಎಗೆ ಕಳಹಿಸಬಹುದು. ನಿಮಗೆ ನೇರವಾಗಿ ಇನ್‌ಶೂರರ ದೂರು ವ್ಯವಸ್ಥೆಯನ್ನು ತಲಪಲು ಸಾಧ್ಯವಾಗದಿದ್ದರೆ, ಐಜಿಎಮ್‌ಎಸ್ ಇವರು ನಿಮ್ಮ ದೂರನ್ನು ವಿಮಾ ಕಂಪೆನಿಯಲ್ಲಿ ನೋಂದಾಯಿಸಿಕೊಳ್ಳುವ ಪರ್ಯಾಯ ವ್ಯವಸ್ಥೆಯನ್ನು ಮಾಡುತ್ತಾರೆ.

ಐಜಿಎಮ್‌ಎಸ್‌ನ ಮೂಲಕ ನಿಮ್ಮ ದೂರನ್ನು ದಾಖಲಿಸುವುದು ಮಾತ್ರವಲ್ಲದೆ (ಅಂದರೆ ವೆಬ್) ದೂರುಗಳನ್ನು ದಾಖಲಿಸಲು ನಿಮಗೆ ಅನೇಕ ಮಾಧ್ಯಮಗಳಿವೆ- ಇ - ಮೈಲ್‌ನ ಮೂಲಕ (complaints@irda.gov.in) ಪತ್ರದ ಮೂಲಕ (ನಿಮ್ಮ ಪತ್ರಗಳನ್ನು ಕ‌ನ್‌ಸ್ಯೂವರ್ ಅಫೇರ್ಸ್ ಡಿಪಾರ್ಟ್‌ವೆಂಟ್, ಇನ್‌ಶೂರೆನ್ಸ್ ರೆಗ್ಯುಲೇಟರಿ ಆಂಡ್ ಡೆವಲಪ್‌ಮೆಂಟ್ ಅಥಾರಿಟಿ, 3 ನೇ ಮಹಡಿ, ಪರಿಶ್ರಮ್ ಭವನ, ಬಶೀರ್‌ಭಾಗ್, ಹೈದರಾಬಾದ್ : 4 ಇಲ್ಲಿಗೆ ಕಳುಹಿಸಿರಿ) **ಅಥವಾ ನಿ:ಶುಲ್ಕ ನಂ :** 155255 ಈ ನಿ:ಶುಲ್ಕ ನಂಬರ್‌ನಲ್ಲಿ ಐಆರ್‌ಡಿಎ ಕಾಲ್ ಸೆಂಟರ್‌ಗೆ ಕರೆ ಮಾಡಿರಿ, ಇದರ ಮೂಲಕ

ಐಆರ್‌ಡಿಎ ಉಚಿತವಾಗಿ ನಿಮ್ಮ ದೂರುಗಳನ್ನು ವಿಮಾ ಕಂಪೆನಿಗಳ ವಿರುದ್ಧ ನೋಂದಾಯಿಸಿಕೊಳ್ಳುತ್ತದೆ ಹಾಗೂ ಅದರ ಸ್ಥಿತಿಯನ್ನು ತಿಳಿದುಕೊಳ್ಳಲು ಸಹಾಯ ಮಾಡುತ್ತದೆ. ಕಾಲ್ ಸೆಂಟರ್ ಕರೆಯ ಆಧಾರದಲ್ಲಿ ದೂರು ಫಾರ್ಮ್‌ನ್ನು ತುಂಬಿಸಲು ಸಹಾಯ ಮಾಡುತ್ತದೆ ಆವಶ್ಯಕವಾದಾಗಲೆಲ್ಲ ಅದು ವಿಮಾ ಕಂಪೆನಿಯ ವಿಳಾಸ, ಟೆಲಿಫೋನ್ ಕ್ರಮಾಂಕ, ವೆಬ್‌ಸೈಟ್ ವಿವರಗಳು , ಸಂಪರ್ಕ ನಂಬರ್, ಇ-ಮೈಲ್ ಇವುಗಳಿಗೆ ಸಂಬಂಧಿಸಿದ ಮಾಹಿತಿಯನ್ನು ನೀಡುವ ಮೂಲಕ ನೇರವಾಗಿ ಮೊದಲಿಗೆ ದೂರುಗಳನ್ನು ಸಲ್ಲಿಸುವ ಸೌಲಭ್ಯವನ್ನು ಒದಗಿಸುತ್ತದೆ. ಐಆರ್‌ಡಿಎ ಕಾಲ್‌ಸೆಂಟರ್ ಸೋಮವಾರದಿಂದ ಶನಿವಾರದ ತನಕ ಬೆಳಿಗ್ಗೆ ಗಂಟೆ 8 ರಿಂದ ರಾತ್ರಿ ಗಂಟೆ 8 ರ ತನಕ ಹಿಂದಿ, ಇಂಗ್ಲಿಷ್ ಮತ್ತು ವಿವಿಧ ಭಾರತೀಯ ಭಾಷೆಗಳಲ್ಲಿ 12 ತಾಸು X 6 ದಿನಗಳು ಸೇವಾ ವೇದಿಕೆಯ ಮೂಲಕ ವಾಸ್ತವಿಕ ಪರ್ಯಾಯ ಮಾಧ್ಯಮವನ್ನು ಪ್ರಸ್ತಾವಿತರಿಗೆ ಮತ್ತು ಪಾಲಿಸಿಧಾರಕರಿಗೆ ಸಮಗ್ರ ಕಾರ್ಯ ಸೌಲಭ್ಯವನ್ನು ಒದಗಿಸುತ್ತದೆ.

ಐಆರ್‌ಡಿಎಯಲ್ಲಿ ಒಂದು ದೂರನ್ನು ದಾಖಲಿಸಿದಾಗ, ಅದು ವಿಮಾ ಕಂಪೆನಿಯೊಂದಿಗೆ ಅದರ ನಿವಾರಣೆಗಾಗಿ ಪ್ರಯತ್ನಿಸುತ್ತದೆ. ದೂರನ್ನು ನಿವಾರಿಸಲು ಕಂಪೆನಿಗೆ 15 ದಿನಗಳನ್ನು ನೀಡಲಾಗುತ್ತದೆ. ಆವಶ್ಯಕ ಎಂದಾದರೆ, ಐಆರ್‌ಡಿಎಯು ತನಿಖೆಗಳನ್ನು ಮತ್ತು ವಿಚಾರಣೆಗಳನ್ನು ಮಾಡುತ್ತದೆ. ಅಲ್ಲದೆ, ಅನ್ವಯವಾಗುವಲ್ಲೆಲ್ಲಾ, ರಿಡ್ರೆಸ್ಸಲ್ ಆಫ್ ಪಬ್ಲಿಕ್ ಗ್ರಿವೆನ್ಸಸ್ ರೂಲ್ಸ್ 1998 ರ ಪ್ರಕಾರ ದೂರು ನೀಡಿದವರನ್ನು ವಿಮಾ ಒಂಬುಡ್ಸ್‌ಮೆನ್‌ರನ್ನು ಸಂಪರ್ಕಿಸಲು ಸಲಹೆ ನೀಡುತ್ತದೆ.



**ಅನಂಗೀಕಾರ:**

ಈ ಕೈಪಿಡಿಯು ನಿಮಗೆ ಸಾಮಾನ್ಯ ಮಾಹಿತಿಯನ್ನು ಮಾತ್ರ ನೀಡುವ ಉದ್ದೇಶವನ್ನು ಹೊಂದಿದೆ ಮತ್ತು ಇದು ಎಲ್ಲವನ್ನೂ ಒಳಗೊಂಡಿಲ್ಲ. ಇದೊಂದು ಶೈಕ್ಷಣಿಕ ಉಪಕ್ರಮವಾಗಿದೆ ಮತ್ತು ಯಾವುದೇ ಕಾನೂನು ಸಲಹೆಯನ್ನು ನೀಡುವ ಉದ್ದೇಶವನ್ನು ಹೊಂದಿಲ್ಲ.